ಕಂಗೊಳಿಸುತ್ತಿದ್ದ ವೆಂಕಟೇಶ ಪುರೋಹಿತರು ಪ್ರಾಚೀನ ಸನಾತನ ಸಂಪ್ರದಾಯವೊಂದರ ಪಳಿಯುಳಿಕೆಯಂತೆ ಕಾಣುತ್ತಿದ್ದರು. ಐದಂಕಿ ಸಂಬಳ ಪಡೆಯುತ್ತಿದ್ದ ಸಾಕಷ್ಟು ಸ್ಥಿತಿವಂತನಾಗಿದ್ದ ವರ ಮನಸ್ಸಿಗೆ ಹಿಡಿಸಿದರೂ ತಂದೆ ತಾಯಿ ಇಲ್ಲದ ಅನಾಥನೆಂಬುದು ಮುಖ್ಯ ಸಮಸ್ಯೆಯಾಗಿತ್ತು. ಹೆಸರು ಶ್ರೀಹರಿ ಎಂದಿದ್ದರೂ ತಮ್ಮದೇ ಸಮುದಾಯದ ಲಂಬನಾಮವೋ ಇಲ್ಲ ಅಡ್ಡನಾಮವೋ ಎನ್ನುವುದು ನಿಗೂಢವಾಗಿತ್ತು. ಯಾವ ನಾಮವಾದರೂ ಸರಿ ಕಡೆಪಕ್ಷ ತಮ್ಮ ಪೈಕಿಯಾಗಿದ್ದರೆ ಮಗಳನ್ನು ಧಾರೆಎರೆದು ಕೊಟ್ಟರಾಯಿತೆನ್ನುವ ನಿರ್ಧಾರಕ್ಕೆ ಬಂದಿದ್ದರು. ಇದೇ ವಿಷಯವನ್ನು ಚರ್ಚಿಸಲು ಒಂದುಕಾಲದಲ್ಲಿ ತಮ್ಮ ಸಹೋದ್ಯೋಗಿ ಎನ್ನುವ ಸಲುಗೆಯಿಂದ ವಾಸನ್ಸ್ವಾಮಿಯನ್ನು ಮನೆಗೆ ಬರಹೇಳಿದ್ದರು.

'ಅಪ್ಪ ಕಾಲ ಬದಲಾಗ್ಯಾದ. ಶ್ರೀಹರಿಗಿ ಗೊತ್ತಾದರ ನೊಂದುಕೋತಾನ. ಅವನಿಗಿ ಅಪಮಾನ ಮಾಡಿದರ ಅದು ನನಗೂ ಅಪಮಾನ ಮಾಡಿದಂಗ' ಮಗಳು ಶ್ರೀಲಕ್ಷ್ಮಿಯ ವಿರೋಧದ ನಡುವೆಯೂ ಪುರೋಹಿತರು ಶ್ರೀಹರಿಯನ್ನು ವಾಸನ್ಸ್ವಾಮಿ ಎದುರು ಕೂಡಿಸಿ ನಡುನೆತ್ತಿಯನ್ನು ಮೂಸಲು ಅನುವು ಮಾಡಿಕೊಟ್ಟರು. 'ಒಂದು ನಿಮ್ಮ ಪೈಕಿ ವಾಸನಿ ಇನ್ನೊಂದು ಬ್ಯಾರೆ ಪೈಕಿ ವಾಸನಿ. ಸಂಬಂಧ ಬೆಳಸದೆ ಇರೋದೆ ಛಲೋ. ಗೊತ್ತಿದ್ದೂ ಮುಂದುವರೆದರ ಜೀವನದಾಗ ಅನುಭವಿಸಬೇಕಾಗತದ' ಎಂದು ವಾಸನ್ಸ್ವಾಮಿ ಹೆದರಿಸುವ ಮಾತನಾಡಿದ.

'ಶ್ರೀಮಠದ ಬಾಗಿಲಲ್ಲಿ ಸಿಕ್ಕ ಕೂಸಂತ ಇವನು. ಅಂದ ಮ್ಯಾಲ ಹುಡುಗನ ಅಪ್ಪ ಅಮ್ಮ ನಮ್ಮ ಪೈಕಿನೇ ಆಗಿರಬೇಕು ಅನಿಸತದ. ಕ್ಷೇತ್ರಕ್ಕಿಂತ ಬೀಜಕ್ಕ ಹೆಚ್ಚು ಪ್ರಾಮುಖ್ಯತಾ ಅದಾ. ಕೊನಿಪಕ್ಷ ಸೃಷ್ಟಿಸಿದ ಬೀಜಾ ಆದರೂ ನಮ್ಮಪೈಕಿ ಆಗಿದ್ದರ ಸಾಕು. ಬೀಜದ ವಾಸನಿ ಯಾವುದು ಅಂತ ನೋಡು' ಎಂದು ಪುರೋಹಿತರು ವಾಸನ್ಸ್ವಾಮಿಯನ್ನು ಪುಸುಲಾಯಿಸಿದರು.

'ಅದಕ್ಕ ಬ್ಯಾರೆ ಪರೀಕ್ಷಾ ಮಾಡಬೇಕು. ಹುಡುಗ ತಯ್ಯಾರ ಅದಾನಿಲ್ಲ ಕೇಳಿ' ಎಂದ ಮಾತಿಗೆ ಶ್ರೀಲಕ್ಷ್ಮಿ ಕೋಪಗೊಂಡು ವಾಸನ್ಸ್ವಾಮಿಯನ್ನು ಬೈಯ್ದು ಕಳಿಸಿದವಳು, ಅದೇ ಸಂಜೆ ಶ್ರೀಹರಿಯೊಡನೆ ಬೆಂಗಳೂರಿನ ಬಸ್ ಹತ್ತಿದಳು. ಇದಾದ ತಿಂಗಳಿಗೆ ಶ್ರೀಲಕ್ಷ್ಮಿ ಅಪ್ಪ ಅಮ್ಮನಿಗೂ ತಿಳಿಸದೆ ಶ್ರೀಹರಿಯನ್ನು ವರಿಸಿ ವಾಸನ್ಸ್ವಾಮಿಯ ಭವಿಷ್ಯವನ್ನು ಸುಳ್ಳಾಗಿಸಿದಳು. ಮಗಳ ಮನೆಗೆ ಹೋದಾಗಲೆಲ್ಲ ಶ್ರೀಹರಿ ಸಹಜವೆಂಬಂತೆ ವಾಸನ್ಸ್ವಾಮಿಯ ಬಗ್ಗೆ ವಿಚಾರಿಸುತ್ತಿದ್ದ ಮಾತು ಪುರೋಹಿತರಿಗೆ ವ್ಯಂಗ್ಯದಂತೆ ಭಾಸವಾಗುತ್ತಿತ್ತು.

* * *

ಈಗೀಗ ತನ್ನ ಮಕ್ಕಳ ನಡುನೆತ್ತಿಯನ್ನು ಮೂಸಿ ನೋಡಬೇಕೆನ್ನುವ ಬಯಕೆ ವಾಸನ್ಸ್ವಾಮಿಯನ್ನು ಇನ್ನಿಲ್ಲದಂತೆ ಕಾಡತೊಡಗಿತು. ಊರು ಮತ್ತು ಸುತ್ತಲಿನ ಹಳ್ಳಿಗಳ ಅದೆಷ್ಟೋ ಜನರ ಅನುಮಾನಗಳನ್ನು ನಡುನೆತ್ತಿಯನ್ನು ಮೂಸಿ ನೋಡುವುದರ ಮೂಲಕವೇ ಬಗೆಹರಿಸಿದ್ದು ವಾಸನ್ಸ್ವಾಮಿಯ ಬಯಕೆ ಬಲವಾಗಲು ಕಾರಣವಾಗಿತ್ತು. ಅದರಲ್ಲೂ ಮೂಲಿಮನಿ ಕಾಳಪ್ಪನ ಗಂಡಸುತನದ ಹಿಂದಿರುವ ರಹಸ್ಯವನ್ನು ಭೇದಿಸಿದ ದಿನದಿಂದ ವಾಸನ್ಸ್ವಾಮಿಗೆ ತನ್ನ ಸಂತಾನದ ಸೃಷ್ಟಿಯ ಹಿಂದಿರುವ ಬೀಜದ ಮೂಲವನ್ನು ಪತ್ತೆ ಹಚ್ಚುವ ಬಯಕೆ ಕುಳಿತಲ್ಲಿ ನಿಂತಲ್ಲಿ ಬೆನ್ನುಹತ್ತಿದ ಭೂತದಂತಾಯಿತು.

ನೀನು ಗಂಡಸೇ ಅಲ್ಲ ಎಂದು ತುಂಬಿದ ಸಭೆಯಲ್ಲಿ ಅವಮಾನಿಸಿ ತಾಳಿಕಿತ್ತೆಸೆದು ಬಿಟ್ಟುಹೋದ ಹೆಂಡತಿಗೆ ಸವಾಲೆಸೆಯುವಂತೆ ಎರಡನೇ ಮದುವೆಯಾಗಿ ಕೈಹಿಡಿದವಳನ್ನು ಬಸಿರಾಗಿಸಿ ಕಾಳಪ್ಪ ತಾನು ಗಂಡಸೆಂದು ಸಾಬೀತುಪಡಿಸಿದ್ದ. ಆಸ್ತಿಯನ್ನು ಕಬಳಿಸಲು ಹೊಂಚುಹಾಕಿ ಕುಳಿತಿದ್ದ ಅಕ್ಕ ಭಾವನಿಗೆ ಕಾಳಪ್ಪನ ಹೆಂಡತಿ ಬಸಿರಾದ ಸುದ್ದಿ ಅವರ ಆಸೆಗೆ ತಣ್ಣೀರೆರಚಿತ್ತು. ಮಗುವಿನ ತೊಟ್ಟಿಲು ಕಾರ್ಯಕ್ರಮಕ್ಕೆಂದು ತವರಿಗೆ ಬಂದಿದ್ದ ಮಾದೇವಿ



ಕೂಸನ್ನು ಬಗಲಲ್ಲಿಟ್ಟುಕೊಂಡು ವಾಸನ್ಸ್ವಾಮಿ ಮನೆಗೆ ಬಂದು ಮಗುವಿನ ಹುಟ್ಟಿನ ಹಿಂದಿರುವ ಬೀಜದ ಪತ್ತೆ ಹಚ್ಚುವಂತೆ ವರಾತ ತೆಗೆದಿದ್ದಳು. ಕೂಸಿನ ನಡುನೆತ್ತಿಯನ್ನು ಆಘ್ರಾಣಿಸಿದ ವಾಸನ್ಸ್ವಾಮಿ ಮೂಗಿಗೆ ಊರಿನ ಮಠದ ವಾಸನೆ ಬಡಿದು ಬೆಚ್ಚಿಬಿದ್ದಿದ್ದ. ದಿನದ ಇಪ್ಪತ್ನಾಲ್ಕು ಗಂಟೆ ಮಠದಲ್ಲೇ ಠಳಾಯಿಸುವ ಕಾಳಪ್ಪನ ಗಂಡಸುತನದ ಹಿಂದಿರುವ ನಿಜವಾದ ಹಕೀಕತ್ತು ಮಠದ ಕಿರಿಯ ಅಪಗೊಳು ಎನ್ನುವ ಸುದ್ದಿ ಕಾಡ್ಗಿಚ್ಚಿನಂತೆ ಊರಿನ ಸಂದಿಗೊಂದಿಗಳನ್ನು ಹಾಯ್ದು ಪ್ರತಿ ಮನೆಯನ್ನು ಮುಟ್ಟಿ ಜನರು ಕೂತಲ್ಲಿ ನಿಂತಲ್ಲಿ ಚರ್ಚಿಸಲು ಗ್ರಾಸವಾಯಿತು.

ಏಕಕಾಲಕ್ಕೆ ತನ್ನ ಗಂಡಸುತನಕ್ಕೂ ಮತ್ತು ಆಸ್ತಿಗೂ ವಾರಸುದಾರನೊಬ್ಬ ದೊರೆತ ಖುಷಿಯಲ್ಲಿದ್ದ ಕಾಳಪ್ಪ, ವಾಸನ್ಸ್ವಾಮಿ ಹೇಳಿಕೆಯಿಂದ ಮುಜುಗರಕ್ಕೊಳಗಾಗಿ ರಾತ್ರೋರಾತ್ರಿ ಹೆಂಡತಿ ಮತ್ತು ಮಗುವಿನೊಡನೆ ಊರು ತೊರೆದ. ಅದೇರಾತ್ರಿ ಮಠದ ಕಿರಿಯ ಅಪಗೊಳು ನಿಗೂಢವಾಗಿ ಕಣ್ಮರೆಯಾಗಿ ಊರಿನ ಜನ ಬೆಚ್ಚಿಬೀಳುವಂತಾಯಿತು.

ಕಾಳಪ್ಪನ ಸುದ್ದಿಯನ್ನು ಜಗಜ್ಜಾಹೀರುಗೊಳಿಸಿದ ನಂತರ ವಾಸನ್ಸ್ವಾಮಿಯ ಅನುಮಾನ ಕೈಹಿಡಿದ ಹೆಂಡತಿಯತ್ತ ತಿರುಗಿತು. ತನ್ನ ಮೂರು ಸಂತಾನಗಳ ಸೃಷ್ಟಿಯ ಹಿಂದಿರುವ ಬೀಜದ ಮೂಲವನ್ನು ಪತ್ತೆ ಹಚ್ಚಬೇಕೆನ್ನುವ ಕಾತುರ ದಿನದಿಂದ ದಿನಕ್ಕೆ ಹೆಚ್ಚತೊಡಗಿತು. ಹೆಣ್ಣುಮಕ್ಕಳಿಬ್ಬರನ್ನು ತಲೆಗೆ ಎಣ್ಣೆ ಹಚ್ಚುವ ನೆಪದಲ್ಲಿ ಹತ್ತಿರ ಕರೆದು ನಡುನೆತ್ತಿಯನ್ನು ಆಘ್ರಾಣಿಸಿದವನಿಗೆ ತನ್ನದೇ ವಾಸನೆ ಮೂಗಿಗೆ ಬಡಿದು ಸಮಾಧಾನಗೊಂಡ. ತೊಟ್ಟಿಲಲ್ಲಿದ್ದ ಗಂಡು ಸಂತಾನವನ್ನು ಎತ್ತಿ ಆಡಿಸುತ್ತ ನೆತ್ತಿ ಮೂಸಿದವನಿಗೆ ವಿಚಿತ್ರ ವಾಸನೆ ಮೂಗಿಗೆ ಬಡಿದು ಆತಂಕಗೊಂಡ. ಆಘ್ರಾಣಿಸಿದ ವಾಸನೆಯಲ್ಲಿ ತನ್ನ ಮನೆತನದ ವಾಸನೆ ಇಲ್ಲದಿರುವುದನ್ನು ಗುರುತಿಸಿ ಹೆಂಡತಿಯ ನಡತೆ ಬಗ್ಗೆ ಸಂಶಯಗೊಂಡ. ಅನುಮಾನ ಹುತ್ತದಂತೆ ಬೆಳೆದು ತಾನು ಒಳಗೆ ಸಿಕ್ಕುಹಾಕಿಕೊಂಡು ಉಸಿರುಗಟ್ಟಿದ ಅನುಭವವಾಗಿ ತಾಳಲಾರದೆ ಹೆಂಡತಿ ದ್ರಾಕ್ಷಾಯಿಣಿಯನ್ನು ಹೇಳುವಂತೆ ಪೀಡಿಸತೊಡಗಿದ.

ಮೂರನೆಯದ್ದು ಹೆಣ್ಣಾದರೆ ತಾನು ಮತ್ತೊಂದು ಮದುವೆಯಾಗುವುದಾಗಿ ಬೆದರಿಕೆ ಹಾಕಿದ ಅಳಿಯನ ಯೋಜನೆಯನ್ನು ವಿಫಲಗೊಳಿಸಲು ಹೆರಿಗೆಯಾದ ರಾತ್ರಿಯೇ ಆಸ್ಪತ್ರೆಯಲ್ಲಿ ಕೂಸು ಬದಲಿಸುವ ವ್ಯವಸ್ಥೆ ಮಾಡಿದ್ದ ಅಪ್ಪನ ಕುತಂತ್ರದ ಅರಿವು ದ್ರಾಕ್ಷಾಯಿಣಿಗಿರಲಿಲ್ಲ. ಗಂಡು ಸಂತಾನದೊಂದಿಗೆ ಮಗಳು ಸುರಕ್ಷಿತವಾಗಿ ಗಂಡನ ಮನೆ ಸೇರಿದಳೆಂಬ ಖುಷಿಯಲ್ಲಿ ಅಪ್ಪ ಮುಂದೆ ಕೆಲವೇ ದಿನಗಳಲ್ಲಿ ಹೃದಯಾಘಾತದಿಂದ ಅಸುನೀಗಿದ್ದ.

ದ್ರಾಕ್ಷಾಯಿಣಿ ಹಲವು ಬಗೆಯಲ್ಲಿ ಗಂಡನಿಗೆ ತಿಳಿಹೇಳಲು ಪ್ರಯತ್ನಿಸಿದಳು. ತಾನು ಪತಿನಿಷ್ಠೆ ಇರುವ ಹೆಣ್ಣು ತನ್ನ ಶೀಲದ ಬಗ್ಗೆ ಅನುಮಾನಬೇಡ ಎಂದು ಕೈಮುಗಿದು ಬೇಡಿಕೊಂಡಳು. ಸಂಶಯದ ಬೀಜ ಮೊಳಕೆಯೊಡೆದು ಹೆಮ್ಮರವಾಗಿ ಬೆಳೆದಿದ್ದ ವಾಸನ್ಸ್ವಾಮಿಯ ಮನಸ್ಸು ದ್ರಾಕ್ಷಾಯಿಣಿಯ ಮಾತು ಒಪ್ಪಲು ಸಿದ್ಧವಿರಲಿಲ್ಲ.

ದಿನಕಳೆದಂತೆ ವಾಸನ್ಸ್ವಾಮಿ ಮಾನಸಿಕವಾಗಿ ಜರ್ಜರಿತನಾದ. ಊರಿನ ಪ್ರತಿಯೊಬ್ಬರ ಮುಖದಲ್ಲಿ ತನ್ನ ಮಗನ ಹೋಲಿಕೆಯನ್ನು ಹುಡುಕತೊಡಗಿದ. ಗುಡಿಯ ಪೂಜೆ ಮತ್ತು ದಿನನಿತ್ಯದ ವ್ಯವಹಾರದಲ್ಲಿ ಆಸಕ್ತಿ ಕಳೆದುಕೊಂಡು ಚಿಂತೆಯಿಂದ ಅವನ ದೇಹ ಕೃಶವಾಯಿತು. ಈಗೀಗ ಜನರಿಗೆ ವಾಸನ್ಸ್ವಾಮಿಯಲ್ಲಿ ದಿವ್ಯಶಕ್ತಿ ನಶಿಸಿದೆ ಎಂದು ಅನಿಸತೊಡಗಿ ಕ್ರಮೇಣ ಅವನ ಬಳಿ ಬರುವವರ ಸಂಖ್ಯೆ ಕ್ಷೀಣಿಸತೊಡಗಿತು.

ಅದೊಂದು ದಿನ ನಸುಕಿನಲ್ಲಿ ಮಠಕ್ಕೆ ಹೋಗಿ ಪ್ರಾಂಗಣದಲ್ಲಿ ನಾಲ್ಕು ಸುತ್ತು ಹಾಕಿ ಅಲ್ಲಿಯೇ ಆವರಣದಲ್ಲಿದ್ದ ಬಾವಿಗೆ ಜಿಗಿದ. ವಾಸನ್ಸ್ವಾಮಿ ಸತ್ತ ದಿನ ಇಡೀ ಊರು ಶಾಪವಿಮೋಚನೆಗೊಂಡ ದೇವಕನ್ನಿಕೆಯಂತೆ ಶೋಭಿಸುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in